

## ಬೆಟ್ಟದ ರಕ್ಷಣೆಗೆ ನಿಂತ ಹುಲಿರಾಯ!

ಜೋಯಿಡಾ ತಾಲ್ಲೂಕಿನ ಉಳವಿಯ ಚನ್ನ ಬಸವೇಶ್ವರ ದೇವಸ್ಥಾನಕ್ಕೆ ಭೇಟಿ ಕೊಡುವವರು ಹಾಗೆಯೇ ಅಲ್ಲಿನ ಆಕಳ ಗವಿ ಬೆಟ್ಟಕ್ಕೆ ಹೋಗಿ ನಿಸರ್ಗದ ಮಡಿಲಲ್ಲಿ ವಿಹರಿಸಬಹುದು. ಕಾಡಿನ ಮಧ್ಯದಲ್ಲಿರುವ ಆಕಳ ಗವಿ ಬೆಟ್ಟ ತಲುಪಲು ಸುಮಾರು ಎರಡು–ಮೂರು ಕಿಲೋಮೀಟರ್ ಕ್ರಮಿಸಬೇಕಾಗುತ್ತದೆ. ಬೆಟ್ಟದ ಸೌಂದರ್ಯವು ಇಲ್ಲಿಗೆ ಬರುವವರನ್ನು ಮೂಕವಿಸ್ಮಿತಗೊಳಿಸುವುದಂತೂ ಗ್ಯಾರಂಟಿ. ಬೆಟ್ಟದ ಮೇಲ್ಭಾಗದಲ್ಲಿ ಹುಲಿಯೊಂದು ಮಲಗಿ ಇಡೀ ಬೆಟ್ಟ ರಕ್ಷಿಸುತ್ತಿದೆ ಎಂಬಂತೆ ಭಾಸವಾಗುತ್ತದೆ.

–ಚನ್ನಕೇಶವ ಅವರಾದಿ, ಜಮಖಂಡಿ

## ಬ್ರಹ್ಮಗಿರಿಯಲ್ಲಿ ಹಾರುವ ತಟ್ಟೆ

ಈಚೆಗೆ ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕಿನ ಬ್ರಹ್ಮಗಿರಿ ಬೆಟ್ಟದಲ್ಲಿ ಚಾರಣ ನಡೆಸುತ್ತಿದ್ದಾಗ ಅಲ್ಲಿದ್ದ ಬಂಡೆಯೊಂದು ಗಮನಸೆಳೆಯಿತು. ನೋಡಲು ಅದು ಆಕಾಶದಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುವ ಹಾರುವ ತಟ್ಟೆಗಳಂತೆಯೇ ಇತ್ತು. ಸುಮಾರು ಎಂಟು ಅಡಿ ಅಗಲ, ಮೂರು ಅಡಿ ಎತ್ತರದ ಈ ಬಂಡೆ ಥೇಟ್ ಯುಎಫ್‌ಒ (ಗುರುತಿಸಲಾಗದ ಹಾರುವ ವಸ್ತುಗಳಿಗೆ) ರೀತಿಯೇ ಕಂಡಿತು. ಇನ್ನು ಈ ಯುಎಫ್‌ಒಗಳು ಆಗಾಗ್ಗೆ ಆಕಾಶದಲ್ಲಿ ಕಾಣಿಸಿಕೊಂಡು ಜನರಲ್ಲಿ, ವಿಜ್ಞಾನಿಗಳಲ್ಲಿ ಕುತೂಹಲ ಮೂಡಿಸುತ್ತವೆ. ಇವುಗಳ ಬಗ್ಗೆ ವಿಜ್ಞಾನಿಗಳು ಮತ್ತು ಕೆಲವು ಸಂದೇಹವಾದಿ ಸಂಸ್ಥೆಗಳು ಅಧ್ಯಯನವನ್ನೂ ನಡೆಸುತ್ತಿವೆ. ಆಕಾಶದಲ್ಲಿ ಹಾರುವ ವಸ್ತುವನ್ನೇ ಹೋಲುತ್ತಿದ್ದ ಈ ಕಲ್ಲುಬಂಡೆಯನ್ನು ಕಂಡಾಕ್ಷಣ ಒಂದು ಕ್ಷಣ ಯುಎಫ್‌ಒನೇ ಇಲ್ಲಿ ಲ್ಯಾಂಡ್ ಆಗಿದೆಯೇನೋ ಅನಿಸಿತು. ನೈಸರ್ಗಿಕವಾಗಿ ಈ ರೀತಿ ರೂಪುಗೊಂಡ ಬಂಡೆಗಳು ಕಾಣಸಿಗುವುದು ವಿರಳ.

–ಜಿ. ನಾಗೇಂದ್ರ, ಕಾವೂರು, ಸಂಡೂರು





## ಜೀವಂತಿಕೆಯ ಕಲ್ಲು ಬಾನಿ

ಮೂಕ ಪ್ರಾಣಿಗಳಿಗೆ ನೀರುಣಿಸಲೆಂದು ಸಾರ್ವಜನಿಕ ಬಾವಿ, ನಲ್ಲಿಗಳ ಬಳಿ ಹಿಂದಿನ ಕಾಲದಲ್ಲಿ ಕಲ್ಲಿನ ತೊಟ್ಟಿಯನ್ನಿಡಲಾಗುತ್ತಿತ್ತು. ಸಾರ್ವಜನಿಕ ನಲ್ಲಿ, ಬಾವಿಗಳಿಂದ ನೀರು ಪಡೆಯುವವರು ಕಡ್ಡಾಯವಾಗಿ ಒಂದು ಕೊಡ ನೀರನ್ನು ಕಲ್ಲು ಬಾನಿಗಳಿಗೆ (ಅರವಟ್ಟಿಗೆ) ಹಾಕಬೇಕಿತ್ತು. ಇದರಿಂದ ನೀರು ಹಾಕಿದವರಿಗೆ ಮೂಕ ಪ್ರಾಣಿಗಳಿಗೆ ನೀರುಣಿಸಿದ ಧನ್ಯತಾಭಾವವೂ ಮೂಡುತ್ತಿತ್ತು. ಆದರೆ ಕಾಲ ಬದಲಾದಂತೆ ನಗರ ಮತ್ತು ಪಟ್ಟಣಗಳು ಕಾಂಕ್ರೀಟೀಕರಣವಾಗಿದ್ದು, ಮನೆಗೆ ನಲ್ಲಿ ನೀರಿನ ಸಂಪರ್ಕ ಇರುವುದರಿಂದ ಯಾರೂ ಬಾವಿಯಿಂದ ನೀರು ಸೇದುವ ಶ್ರಮವನ್ನೂ ತೆಗೆದುಕೊಳ್ಳುವುದಿಲ್ಲ. ಸಾರ್ವಜನಿಕ ನಲ್ಲಿಗಳೂ ವಿರಳವಾಗಿವೆ. ಇದೆಲ್ಲದರ ನಡುವೆಯೂ ಮೈಸೂರು ಮಹಾನಗರದ ದಿವಾನ್ಸ್ ರಸ್ತೆಯಲ್ಲಿರುವ ಸಾರ್ವಜನಿಕ ನಲ್ಲಿಯ ಪಕ್ಕ ಇರುವ ಕಲ್ಲು ಬಾನಿಯೊಂದು ಇನ್ನೂ ಮೂಕ ಪ್ರಾಣಿಗಳಿಗೆ ನೀರುಣಿಸುತ್ತಿರುವುದು ಸಂತಸದ ಸಂಗತಿ.

–ಎ.ಆರ್. ಗಿರಿಧರ, ಮೈಸೂರು